ದಿ.21.08.2024 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ.ಎನ್.ಟಿ ವಕೀಲರಿಂದ.**

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದನ್ನು ನಾನೇ ಹೇಳಿ ಬರೆಸಿದ್ದೇನೆ ಹಾಗೂ ಪ್ರಮಾಣ ಪತ್ರಕ್ಕೆ ನಾನೇ ಸಹಿ ಮಾಡಿರುತ್ತೇನೆ.

ನಾನು ಈ ದಿವಸ ಈ ಕೆಳಕಂಡ ದಾಖಲೆಗಳನ್ನು ಹಾಜರು ಪಡಿಸುತ್ತಿದ್ದೇನೆ.

1. ದಿಃ 11-04-1954 ರ ಕ್ರಯ ಪತ್ರವನ್ನು ಹಾಜರು ಪಡಿಸಿದ್ದು ನಿ.ಪಿ.-1 ಎಂದು ಗುರುತಿಸಲಾಯಿತು.
2. ಕೈ ಬರವಣಿಗೆಯ ಮುಟೇಶನ್ ಪ್ರತಿಯನ್ನು ಹಾಜರು ಪಡಿಸಿದ್ದು ನಿ.ಪಿ.-2 ಎಂದು ಗುರುತಿಸಲಾಯಿತು.
3. ಗಣಕೀಕೃತ ಮುಟೇಶನ್ ಪ್ರತಿಯನ್ನು ಹಾಜರು ಪಡಿಸಿದ್ದು ನಿ.ಪಿ.3 ಎಂದು ಗುರುತಿಸಲಾಯಿತು.
4. ಸರ್ವೆಯರ್ ರವರು ನೀಡಿದ ನೋಟಿಸನ ಪ್ರತಿ ಹಾಜರು ಪಡಿಸಿದ್ದು ನಿ.ಪಿ -4 ಎಂದು ಗುರುತಿಸಲಾಯಿತು.
5. ನೋಟಿಸ್ ನ ಪ್ರತಿಯನ್ನು ಹಾಜರು ಪಡಿಸಿದ್ದು ನಿ.ಪಿ-5 ಎಂದು ಗುರುತಿಸಲಾಯಿತು.
6. ವಂಶವೃಕ್ಷದ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.
7. ಗಣಕೀಕೃತ ಆರ್.ಟಿ.ಸಿ ಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ರಾಘವೇಂದ್ರ. ಡಿ.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.26.09.2024 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ.ಎನ್.ಟಿ ವಕೀಲರಿಂದ.**

1. ರೀ ಸರ್ವೆ ನಂ. 01/06 ಹದ್ದುಬಸ್ತು ನಕ್ಷೆಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-8 ಎಂದು ಗುರುತಿಸಲಾಯಿತು.

2. ಹುಚ್ಚಮ್ಮನವರ ಮರಣ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-09 ಎಂದು ಗುರುತಿಸಲಾಯಿತು.

3. ದಿಃ 04-04-1968 ರಂದು ವಿಶೇಷ ಆಯುಕ್ತರು ಹೊರಡಿಸಿದ ಆದೇಶದ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-10 ಎಂದು ಗುರುತಿಸಲಾಯಿತು.

4. ದಿಃ 14-10-1970 ರಂದು ವಿಶೇಷ ಆಯುಕ್ತರು ಹೊರಡಿಸಿದ ಆದೇಶದ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-11 ಎಂದು ಗುರುತಿಸಲಾಯಿತು.

5. ಪಿ.ಡಿ.ಎ 195/2017-18 ರ ತಿದ್ದುಪಡಿ ಆದೇಶದ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-12 ಎಂದು ಗುರುತಿಸಲಾಯಿತು.

6. ಪಿ.ಡಿ.ಎ 195/2017-18ರ ಆದೇಶದ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-13 ಎಂದು ಗುರುತಿಸಲಾಯಿತು.

7. ಶಿವಮೊಗ್ಗ-ಭದ್ರಾವತಿ ನಗರಾಭಿವೃದ್ದಿ ಪ್ರಧಿಕಾರದವರು ನೀಡಿದ ದಿಃ 17-07-2019 ರ ದಾಖಲೆಯ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

8. ರಾಜ್ಯಸ್ವ ನೀರಿಕ್ಷಕರ ದಿಃ 24-09-2019 ರಂದು ನೀಡಿದ ದಾಖಲೆಯ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು.

9. ಗ್ರಾಮ ಲೆಕ್ಕಾಧಿಕಾರಿಯವರ ನಿವೇದನೆಯ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-16 ಎಂದು ಗುರುತಿಸಲಾಯಿತು.

10. ರೀ ಸರ್ವೆ ನಂ. ಟಿಪ್ಪಣಿ ಪುಸ್ತಕವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-17 ಎಂದು ಗುರುತಿಸಲಾಯಿತು.

11. ಇ.ಸಿಯ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-18 ಎಂದು ಗುರುತಿಸಲಾಯಿತು.

12. Revision settlement Akarband ಹಾಜರು ಪಡಿಸಿದ್ದು ಅದನ್ನು ನಿಪಿ-19 ಎಂದು ಗುರುತಿಸಲಾಯಿತು.

13. ನಮೂನೆ-05 ಅನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-20 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ರಾಘವೇಂದ್ರ. ಡಿ.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.27.11.2024 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ 01 ಮತ್ತು 02 ನೇ ಪ್ರತಿವಾದಿ ಪರ ಶ್ರೀ ಬಿ.ಆರ್.ಪಿ ವಕೀಲರಿಂದ.**

1. ನಾನು ಪಿ.ಯು.ಸಿ ತನಕ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಕೂಲಿ ಕೆಲಸ ಮಾಡುತ್ತಿರುತ್ತೇನೆ. ಮತ್ತು ಅದರ ಜೊತೆಗೆ ಒಂದುಶಾಲೆಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ನಿರ್ವಹಿಸುತ್ತಿರುತ್ತೇನೆ. ನನಗೆ 01 ಎಕರೆ 02 ಗುಂಟೆ ನನಗೆ ಸೇರಿದೆ ಎಂದು ಹೇಳಿ ಈ ದಾವೆ ಮಾಡಿರುತ್ತೇನೆ. ಈ ಆಸ್ತಿ ನನಗೆ ನನ್ನ ಅಜ್ಜ ಹನುಮಯ್ಯನಿಂದ ಬಂದಿರುತ್ತದೆ. ನನ್ನ ಅಜ್ಜ 1954 ರಲ್ಲಿ ಬೇರೆಯವರಿಂದ ಖರೀದಿ ಮಾಡಿರುತ್ತಾರೆ. ನನ್ನ ಅಜ್ಜ 1954 ರಲ್ಲಿ ಬೇರೆಯವರಿಂದ ಖರೀದಿ ಮಾಡಿರುತ್ತಾರೆ ಎಂದು ಹೇಳಿ ಈಗ ಮೊದಲ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ಕೇಸಿನ ಬಗ್ಗೆ ಪೂರ್ಣ ಮಾಹಿತಿ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ವಾದ ಪತ್ರದ ಪ್ಯಾರಾ 03 ರಲ್ಲಿ ನನ್ನ ತಾಯಿ 1979 ರಲ್ಲಿ ದಾವಾಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದು ಹೇಳಿರುತ್ತೇನೆಂದರೆ ಸರಿಯಲ್ಲ. 1979 ರಿಂದ ಕಂದಾಯಿ ದಾಖಲೆಗಳು ನನ್ನ ತಾಯಿಯ ಹೆಸರಿಗಿದ್ದು ಆ ನಂತರ ನನ್ನ ಹೆಸರಿಗೆ ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 01 ಎಕರೆ ಜಮೀನನ್ನು ಭೂ ಪರಿವರ್ತನೆಗಾಗಿ ನನ್ನ ತಾಯಿ ಅರ್ಜಿಯನ್ನು ಜಿಲ್ಲಾಧಿಕಾರಿಯವರಿಗೆ ಸಲ್ಲಿಸಿರುತ್ತಾರೆ. 01 ಎಕರೆ ಜಮೀನು ಭೂ ಪರಿವರ್ತನೆಯಾಗಿರುತ್ತದೆ. ಆ ಆದೇಶದ ಪ್ರತಿಯನ್ನು ನಾನು ಹಾಜರು ಪಡಿಸಿರುತ್ತೇನೆ. ವಸತಿ ಉದ್ದೇಶಕ್ಕಾಗಿ ಭೂ ಪರಿವರ್ತನೆ ಮಾಡಿಸಿರುತ್ತೇನೆ.

ನಾನು ಲೇ ಔಟ್ ಪ್ಲಾನ್ ಮಾಡಿಸಿರುವುದಿಲ್ಲ. 01 ಎಕರೆ ಜಮೀನು ನಗರಸಭೆ ವ್ಯಾಪ್ತಿಗೆ ಬಂದಿರುವುದಿಲ್ಲ. ನಾವು ಹದ್ದುಬಸ್ತಿಗಾಗಿ ಅರ್ಜಿ ಸಲ್ಲಿಸಿದ ಸಮಯದಲ್ಲಿ ಒತ್ತುವರಿಯಾಗಿರುವ ವಿಚಾರ ಗೊತ್ತಾಗಿರುತ್ತದೆ ಆಗಾಗಿ ನಗರ ಸಭೆಗೆ ಸೇರಿಸಿರುವುದಿಲ್ಲ. ಒಂದು ವೇಳೆ ನಗರಸಭೆ ವ್ಯಾಪ್ತಿಗೆ ಬಂದರೆ ನಿವೇಶನದ ಲೆಕ್ಕದಲ್ಲಿ ಕಂದಾಯ ಕಟ್ಟಬೇಕಾಗುತ್ತದೆ ಎಂದು ಹೇಳಿ ಅದನ್ನು ಇನ್ನು ನಾವು ಸರ್ವೆ ನಂಬರ್ ನಲ್ಲೆ ಇಟ್ಟಿರುತ್ತೇವೆ ಎಂದರೆ ಸರಿಯಲ್ಲ.

2. ನನ್ನ 01 ಎಕರೆ ಜಮೀನನ್ನು ಎರಡು ಬಾರಿ ಸರ್ವೆ ಮಾಡಿಸಿರುತ್ತೇನೆ. ವರ್ಷ ನನಗೆ ನೆನಪಿರುವುದಿಲ್ಲ. ಜಿಲ್ಲಾಧಿಕಾರಿಗಳು ದಾವಾಸ್ವತ್ತನ್ನು ಸರ್ವೆ ಮಾಡಿದ 02 ತಿಂಗಳ ನಂತರ ನಾನು ಪ್ರತ್ಯೇಕವಾಗಿ ಸರ್ವೆ ಮಾಡಿಸಿರುತ್ತೇನೆ. ಜಿಲ್ಲಾಧಿಕಾರಿಗಳ ಕಚೇರಿಯಿಂದ ಬಂದು ಸರ್ವೆ ಮಾಡಿದ ಸಮಯದಲ್ಲಿ ಯಾವುದೇ ಒತ್ತುವರಿ ಕಂಡು ಬಂದಿರುವುದಿಲ್ಲ. ಲೇ ಔಟ್ ಪ್ಲಾನ್ ಮಾಡಿಸುವ ಉದ್ದೇಶದಿಂದ ನಾವು ಪುನಃ ಸರ್ವೆ ಮಾಡಿಸಿರುತ್ತೇವೆ. ಸೂಡಾಧಿಕಾರಿಗಳು ನೀಡಿರುವ ನಕ್ಷೆಯನ್ನು ನಾನು ಹಾಜರು ಪಡಿಸಿರುತ್ತೇನೆ.

3. ವಾದ ಪತ್ರದಲ್ಲಿ ಎ-ಮತ್ತು ಬಿ ಅನುಸೂಚಿ ಸ್ವತ್ತು ಎಂದು ಹೇಳಿ ತೋರಿಸಿದ್ದು ಆ ರೀತಿ ಯಾವ ಉದ್ದೇಶಕ್ಕಾಗಿ ತೋರಿಸಿರುತ್ತೀರಿ ಎಂದರೆ ಒತ್ತುವರಿ ಮಾಡಿದ ಉದ್ದೇಶದಿಂದ ತೋರಿಸಿರುವುದಾಗಿ ಹೇಳುತ್ತಾರೆ. 01 ಎಕರೆ ಜಮೀನಿನಲ್ಲಿ ಕಬ್ಬು ಮತ್ತು ಭತ್ತ ಬೆಳೆಯುತ್ತಿದ್ದೇವು. ಪಹಣಿಯಲ್ಲಿ ಕಂದಾಯಧಿಕಾರಿಗಳು ಯಾವ ಬೆಳೆ ಇರುತ್ತದೆ ಎಂದು ಬರೆಯುತ್ತಾರೆ ಎಂದರೆ ಸರಿ. ಪಹಣಿಯಲ್ಲಿ ನೀರಾವರಿ ಮೂಲ ಕಾಣಿಸುತ್ತಾರೆ ಎಂದರೆ ಸರಿ. ನಮ್ಮ ಜಮೀನಿಗೆ ಭದ್ರಾ ಎಡೆದಂಡೆ ನಾಲೆಯಿಂದ ನೀರಿನ ಸಂಪರ್ಕವಿರುತ್ತದೆ. ನಾನು ವರ್ಷಕ್ಕೆ ಎರಡು ಬೆಳೆಯನ್ನು ಬೆಳೆಯುತ್ತಿದ್ದೇವು.

4. 01 ಮತ್ತು 02 ನೇ ಪ್ರತಿವಾದಿಗಳು ಪರಿಚಯವಿರುತ್ತಾರೆ ಅವರು ನಮ್ಮ ಪಕ್ಕದ ಜಮೀನಿನವರು. ಪ್ರತಿವಾದಿಗಳಿಗೆ ಎಷ್ಟು ವಿಸ್ತೀರ್ಣ ಜಮೀನು ಇದೆ ಎಂದು ದಾಖಲೆಯನ್ನು

ನೋಡಿರುವುದಿಲ್ಲ, ಆಕಾರ್ ಬಂದ್ ನಲ್ಲಿ 20 ಗುಂಟೆ ಜಮೀನು ಎಂದು ತೋರಿಸಿರುತ್ತಾರೆ. ಪ್ರತಿವಾದಿಗಳ ಜಮೀನು 01/04 ರಲ್ಲಿ ಇರುತ್ತದೆ. ನನ್ನ ವಾದ ಪತ್ರದಲ್ಲಿ ಪ್ರತಿವಾದಿಗಳಿಗೆ ಎಷ್ಟು ವಿಸ್ತೀರ್ಣದ ಜಮೀನು ಇದೆ ಎಂದು ತೋರಿಸಿಲ್ಲ ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. 01 ಮತ್ತು 02 ನೇ ಪ್ರತಿವಾದಿ ಸಂಬಂಧಿಕರು ಎಂದರೆ ಸರಿ.

5. ಬಂಡಾರಳ್ಳಿ ಗ್ರಾಮದ ಎಲ್ಲಾ ಜಮೀನುಗಳು ಜೋಡಿ ಇನಾಮ್ ಜಮೀನುಗಳು ಎಂದರೆ ಸರಿ. ಬಂಡಾರಳ್ಳಿ ಗ್ರಾಮದ ಸರ್ವೆ ನಂ. 1 ಮೂಲತಹಃ ವಿಎಸ್ ನಂಬರ್ 7 ಎಂದು ಇತ್ತು ಎಂದರೆ ಸರಿ. ಸರ್ವೆ ನಂ. 01 ರ ಒಟ್ಟು ವಿಸ್ತೀರ್ಣ 04 ಎಕರೆ 29 ಗುಂಟೆ. 01 ಎಕರೆ ಜಮೀನಿನಲ್ಲಿ 15 ಗುಂಟೆ ಚಾನೆಲ್ ಗೆ ಮತ್ತು ರಸ್ತೆ ಕರಾಬಿಗೆ ಹೋಗಿದೆ ಎಂದರೆ ಸರಿಯಲ್ಲ. ಪಹಣಿಯಲ್ಲಿ ಕರಾಬು ಜಮೀನು ಎಷ್ಟು ಎಂದು ನಮೂದು ಆಗಿದೆ ಎಂದರೆ ಸರಿ. ವಿಎಸ್ ನಂಬರ್ 7 ಅನ್ನು ಚೌಡಮ್ಮ ಕೋಂ. ಲಕ್ಷ್ಮಯ್ಯನವರು ದಿಃ 05-07-1972 ರಲ್ಲಿ ಸಾವಿತ್ರಮ್ಮನವರಿಂದ ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ವಿ.ಎಸ್ ನಂಬರ್ 7 ರೀ ಸರ್ವೆ ಯಾಗಿ ಸರ್ವೆ ನಂ. 01 ಎಂದು ಆಗಿರುತ್ತದೆ ಎಂದರೆ ಸರಿ. ಚೌಡಮ್ಮನವರು ಅವಿದ್ಯಾವಂತರು ಎಂದು ನನಗೆ ಗೊತ್ತಿರುವುದಿಲ್ಲ. ಚೌಡಮ್ಮನವರು ಖರೀದಿ ಮಾಡಿದ ನಂತರ ಕಂದಾಯಧಿಕಾರಿಗೆ ಅಶಜಿ ಕೊಟ್ಟು ಪಹಣಿ ಮತ್ತು ಖಾತೆ ಮಾಡಿಸಿಕೊಳ್ಳಬೇಕೆಂಬ ಅರಿವು ಅವರಿಗೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಚೌಡಮ್ಮನವರು 1972 ರಲ್ಲಿ ಖರೀದಿ ಮಾಡಿದಾಗಿನಿಂದಲೂ 30 ಗುಂಟೆ ಜಮೀನಿನಲ್ಲಿ ಸ್ವಾಧೀನದಲ್ಲಿದ್ದರು ಎಂದರೆ ಸರಿಯಲ್ಲ. ಚೌಡಮ್ಮನವರಿಗೆ ಒಬ್ಬಳು ಹೆಣ್ಣು ಮಗಳು ಮತ್ತು 04 ಜನ ಗಂಡು ಮಕ್ಕಳು ಎಂದು ನನಗೆ ಗೊತ್ತಿಲ್ಲ. ಹನುಮಂತಪ್ಪ ಮತ್ತು ರಂಗಪ್ಪ ಚೌಡಮ್ಮನವರ ಮಕ್ಕಳು ಎಂದರೆ ಸರಿ. ಹನುಮಂತಪ್ಪ ಮತ್ತು ರಂಗಪ್ಪ ಜುಬಾನಿ ಹಿಸ್ಸೆ ಪ್ರಕಾರ ತಲಾ 15 ಗುಂಟೆ ಜಮೀನನ್ನು ಅನುಭವಿಸಿಕೊಂಡು ಬರುತ್ತಿರುತ್ತಾರೆ ಎಂದರೆ ಸರಿಯಲ್ಲ. ಉಳಿದ ಮಕ್ಕಳಿಗೆ ಕಾರೆಹಳ್ಳಿಯಲ್ಲಿರುವ ಜಮೀನಿನಲ್ಲಿ ಹಿಸ್ಸೆ ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

ಹನುಮಂತಪ್ಪ ಮತ್ತು ರಂಗಪ್ಪರವರು ಪೌತಿಯಾದ ನಂತರ ತಲಾ 15 ಗುಂಟೆ ಜಮೀನು ಪ್ರತಿವಾದಿಗಳು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಹನುಮಂತಪ್ಪ ಮತ್ತು ರಂಗಪ್ಪನವರ ಹೆಂಡತಿಯರು ಎಂದರೆ ಸರಿ. ಪ್ರತಿವಾದಿಗಳು ತಮ್ಮ ಹೆಸರಿಗೆ ಪಹಣಿ ಮಾಡಿಕೊಡಿ ಎಂದು ಹೇಳಿ ತಾಲ್ಲೂಕು ಕಚೇರಿಗೆ ಅರ್ಜಿಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 02 ನೇ ಪ್ರತಿವಾದಿಯ ಗಂಡ 2017 ರಲ್ಲಿ ಮೃತಪಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗಳು ತಮ್ಮ ಹೆಸರಿಗೆ ಖಾತೆ ಬದಲಾವಣೆ ಮಾಡಿ ಕೊಡಿ ಎಂದು ಅರ್ಜಿ ಕೊಟ್ಟ ನಂತರ ನಾನು ತಾಲ್ಲೂಕು ಕಚೇರಿಗೆ ಖಾತೆ ಬದಲಾವಣೆ ಮಾಡಬೇಡಿ ಎಂದು ಅರ್ಜಿಯನ್ನು ಕೊಟ್ಟಿರುತ್ತೇನೆಂದರೆ ಸಾಕ್ಷಿಯು ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತೇನೆ ಆಗಾಗಿ ಖಾತೆ ಬದಲಾವಣೆ ಮಾಡಬೇಡಿ ಎಂದು ಅರ್ಜಿ ಕೊಟ್ಟಿರುವುದಾಗಿ ಹೇಳುತ್ತಾರೆ. ಪ್ರತಿವಾದಿಗಳು 2017 ರಲ್ಲಿ ತಾಲ್ಲೂಕು ಕಚೇರಿಗೆ ಅರ್ಜಿಯನ್ನು ಕೊಟ್ಟಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 01 ನೇ ಪ್ರತಿವಾದಿಯ ಜಮೀನು ನನ್ನ ಜಮೀನಿನ ಪಶ್ಚಿಮ ಭಾಗಕ್ಕೆ ಬರುತ್ತದೆ. ನನ್ನದೇನಾದರು ಪರಿಹಾರ ಇದ್ದರೆ 01 ನೇ ಪ್ರತಿವಾದಿಯ ಮೇಲೆ ಕೇಳಬೇಕು, 02 ನೇ ಪ್ರತಿವಾದಿಯಿಂದ ಕೇಳಲು ಬರುವುದಿಲ್ಲ ಎಂದರೆ ಸಾಕ್ಷಿಯು ಒಟ್ಟು ಆಸ್ತಿಯಾಗಿರುವುದರಿಂದ ಇಬ್ಬರ ಮೇಲೂ ಕೇಳಿರುತ್ತೇನೆ ಎಂದು ಹೇಳುತ್ತಾರೆ. 01 ನೇ ಪ್ರತಿವಾದಿಗೆ ಹೆಣ್ಣು ಮಕ್ಕಳಿರುತ್ತಾರೆ ಅವರನ್ನು ಪಕ್ಷಗಾರನ್ನಾಗಿ ಸೇರಿಸಿರುವುದಿಲ್ಲ.

6. ಪ್ರತಿವಾದಿಗಳು ಸುಮಾರು 06 ವರ್ಷದ ಹಿಂದೆ ಅಡಿಕೆ ಸಸಿಗಳನ್ನು ನೆಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸ್ವಲ್ಪ ಭಾಗದಲ್ಲಿ ನೆಟ್ಟಿರುತ್ತಾರೆ ಎಂದು ಹೇಳುತ್ತಾರೆ. 01 ನೇ ಪ್ರತಿವಾದಿ 15 ಗುಂಟೆ ಜಮೀನಿನಲ್ಲಿ ಭತ್ತ ಮತ್ತು ಧನದ ಮೇವು ಬೆಳೆಯುತ್ತಾರೆ ಎಂದರೆ ಸರಿಯಲ್ಲ. 02 ನೇ ಪ್ರತಿವಾದಿಯು ನೆಟ್ಟ ಅಡಿಕೆ ಸಸಿಗಳು ಇನ್ನು 02 ವರ್ಷದಲ್ಲಿ ಫಸಲಿಗೆ ಬರುತ್ತದೆ ಎಂದರೆ ಸರಿ. ಹೇಗಾದರು ಮಾಡಿ ಅವರ ಜಮೀನನ್ನು ಹೊಡೆಯಬೇಕೆನ್ನುವ ಉದ್ದೇಶದಿಂದ ಸರ್ವೆಯರ್ ಅನ್ನು ಕರೆದುಕೊಂಡು ಹೋಗಿ ಪ್ರತಿವಾದಿಗಳು ನನ್ನ ಜಮೀನನ್ನು ಒತ್ತುವರಿ ಮಾಡಿರುತ್ತಾರೆ

ಎಂದು ತೋರಿಸುವಂತೆ ನಾನು ನೋಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಸೇರಿದ 01 ಎಕರೆ ಜಮೀನಿಗೆ ನನ್ನ ಕುಟುಂಬದ ಪಹಣಿ ಖಾತೆ ಇಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಆಸ್ತಿ ಪಹಣಿಯಲ್ಲಿ ಸರ್ಕಾರಿ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಪಹಣಿಯಲ್ಲಿ ಸರ್ಕಾರಿ ಇರುವುದನುನ ತೆಗೆದುಹಾಕಬೇಕೆಂದು ಹೇಳಿ ನಾನು ತಹಶೀಲ್ದಾರ್ ರವರಿಗೆ ಅರ್ಜಿ ಕೊಟ್ಟಿದೆ ಎಂದರೆ ಸರಿ. ಸದರಿ ಅರ್ಜಿ ತಮ್ಮ ಮುಂದೆ ಬರುವುದಿಲ್ಲ ಸಂಬಂದಪಟ್ಟ ಅಧಿಕಾರಿಗಳ ಮುಂದೆ ಅರ್ಜಿ ಕೊಡುವಂತೆ ಹೇಳಿ ತಹಶೀಲ್ದಾರ್ ರವರು ಹಿಂಬರಹವನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಶಿವಮೊಗ್ಗದ ಉಪವಿಭಾಗ ಕಚೇರಿಗೆ ನಾನು ಮೇಲ್ಮನವಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ. ಪಿ.ಡಿ.ಎ ಸಂಖ್ಯೆ 195/2017-18 ದಾಖಲು ಮಾಡಿರುತ್ತೇನೆ ಎಂದರೆ ಸರಿ. ದಿಃ 20-01-2018 ರಂದು ಆದೇಶ ಹೊರಡಿಸಿರುತ್ತಾರೆ ಎಂದರೆ ಸರಿ. ಉಪ ವಿಭಾಗಧಿಕಾರಿಗಳು ತಮ್ಮ ಆದೇಶದಲ್ಲಿ ನಾವು ಸ್ವತ್ತಿನಲ್ಲಿ ಅನುಭವ ಮತ್ತು ಸ್ವಾಧೀನದಲ್ಲಿದ್ದರೆ ಮಾತ್ರ ಪಹಣಿಯಲ್ಲಿ ನಮ್ಮ ಹೆಸರು ನಮೂದು ಮಾಡುವಂತೆ ತಹಶೀಲ್ದಾರ್ ರವರಿಗೆ ಆದೇಶ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಉಪವಿಭಾಗಧಿಕಾರಿ ಆದೇಶವಾದ ನಂತರ ನಮ್ಮ ಹೆಸರುಪಹಣಿಯಲ್ಲಿ ಬಂರದಿತ್ತದೆ ಎಂದರೆ ಸಾಕ್ಷಿಯ ಮಂಚ್ಚೆ ಯಿಂದಲ್ಲೂ ಇತ್ತು ಎಂದು ಹೇಳುತ್ತಾರೆ. ನಮ್ಮ ಜಮೀನಿಗೆ ನಾವು ಕಾಲಕಾಲಕ್ಕೆ ಕಂದಾಯ ಪಾವತಿ ಮಾಡುತ್ತಿದ್ದ ಕಾರಣ ಸರ್ಕಾರಿ ಪಡ ಆಗಿತ್ತು ಎಂದರೆ ಸರಿಯಲ್ಲ. ನಾವು 30/40 ವರ್ಷದಿಂದ ಸ್ವಾಧೀನದಲ್ಲಿದ್ದು, ನಮ್ಮ ಹೆಸರಿಗೆ ಪಹಣಿ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ರಾಘವೇಂದ್ರ. ಡಿ.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.21.01.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಪಾಟೀ ಸವಾಲುಃ 01 ಮತ್ತು 02 ನೇ ಪ್ರತಿವಾದಿ ಪರ ಶ್ರೀ ಬಿ.ಆರ್.ಪಿ ವಕೀಲರಿಂದ.**

7. ಸರ್ವೆ ನಂಬರ್ ಒಂದು ಒಟ್ಟು 05 ಎಕರೆ 23 ಗುಂಟೆ ವಿಸ್ತೀರ್ಣವಿರುತ್ತದೆ. ಆ ಬಗ್ಗೆ ಆಕಾರ್ ಬಂದ್ ದಾಖಲೆಯನ್ನು ನೋಡಿರುತ್ತೇನೆ. ಸರ್ವೆ ನಂಬರ್ ಒಂದರಲ್ಲಿ ಖರಾಬು ಜಮೀನು ಇರುತ್ತದೆ ಆದರೆ ಎಷ್ಟು ವಿಸ್ತೀರ್ಣ ವಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. 2017 ರಲ್ಲಿ ನಾನು ಹದ್ದು ಬಸ್ತ ಸರ್ವೆ ಮಾಡಲು ಅರ್ಜಿಯನ್ನು ಕೊಟ್ಟಿರುತ್ತೇನೆ. ನಾನು ಆ ಅರ್ಜಿ ಕೊಟ್ಟ ನಂತರ ಸರ್ವೇಯರ್ ನನ್ನ ಜಮೀನಿಗೆ ಬಂದು ನನ್ನ ಅಕ್ಕ ಪಕ್ಕದ ಜಮೀನುಗಳನ್ನು ಸಹ ಅಳತೆ ಮಾಡಿರುತ್ತಾರೆ. ಸರ್ವೆ ನಂಬರ್ ಒಂದರಲ್ಲಿ ಅಂದಾಜು 06 ಜನ ಇಳುವರಿದಾರರು ಇರುತ್ತಾರೆ. ದೊಡ್ಡಯ್ಯ, ದೇವರಾಜ್, ಕೃಷ್ಣಪ್ಪ, ಸಾವಿತ್ರಮ್ಮ, ನಾನು ಮತ್ತು ಚನ್ನೇಗೌಡರು ಹಾಗೂ ಮತ್ತೊಬ್ಬ ಇಳುವರಿದಾರ ಇರುತ್ತಾರೆ ಅವರ ಹೆಸರು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂಬರ್ ಒಂದರಲ್ಲಿ 04 ಎಕರೆ 21 ಗುಂಟೆ ಜಮೀನು ವಿಸ್ತೀರ್ಣ ವಿರುತ್ತದೆ ಎಂದು ಹೇಳಿ ಸಾಕ್ಷಿಗೆ ಆಕಾರ್ ಬಂದ್ ಉತ್ತಾರನ್ನು ತೊರೀಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ ಒಪ್ಪಿಕೊಂಡಂತಹ ಆಕಾರ್ ಬಂದ್ ಉತ್ತಾರ್ ಅನ್ನು **ನಿಡಿ-01** ಎಂದು ಗುರುತಿಸಲಾಯಿತು.

8. ಸಾಕ್ಷಿಗೆ ಶ್ರೀಮತಿ ಹುಚ್ಚಮ್ಮನವರು ಪಕ್ಕಾ ಪೋಡಿಗೆ ಅರ್ಜಿ ಸಲ್ಲಿಸಿರುತ್ತಾರೆಂದು ಹೇಳಿ ಒಂದು ದೃಢೀಕೃತ ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಹೌದು ಎಂದು ಒಪ್ಪಿಕೊಂಡಿರುತ್ತಾರೆ. ಸಾಕ್ಷಿ

ಒಪ್ಪಿಕೊಂಡಂತಹ ನೋಟಿಸ್ ಅನ್ನು **ನಿಡಿ-02** ಎಂದು ಗುರುತಿಸಲಾಯಿತು. ನಿಡಿ-02 ರ ಪ್ರಕಾರ ಅಜುಬಾಜು ಜಮೀನುದಾರರಿಗೆ ನೋಟಿಸ್ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 2009 ನೇ ಇಸವಿಯಲ್ಲಿ ಸರ್ವೇ ನಂಬರ್ ಒಂದನ್ನು ಅಳತೆ ಮಾಡಿ ಹಿಸ್ಸಾ ನಂಬರ್ ಅನ್ನು ಕೊಟ್ಟಿರುತ್ತಾರೆ ಎಂದರೆ ಸರಿ. ಸರ್ವೇ ನಂಬರ್ ಒಂದರಲ್ಲಿ ಹಿಸ್ಸಾ ಸಂಖ್ಯೆ -06 ನನಗೆ ಸೇರಿದ ಜಮೀನಾಗಿರುತ್ತದೆ. 2009 ನೇ ಇಸವಿಯಲ್ಲಿ ಸರ್ವೆ ನಂಬರ್ ಒಂದನ್ನು ಅಳತೆ ಮಾಡಿ ನಮ್ಮ ಜಮೀನಿಗೆ ಬ್ಲಾಕ್ ನಂಬರ್ 06 ಎಂದು ಕೊಟ್ಟ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂಬರ್ ಒಂದರಲ್ಲಿರುವ ಬ್ಲಾಕ್ ನಂಬರ್ 01/01 ರಿಂದ 01/05 ರ ತನಕ ಬಂಡಾರಳ್ಳಿ ರಸ್ತೆ ಹಾದು ಹೋಗಿರುತ್ತದೆ ಎಂದರೆ ಸರಿ. ರಸ್ತೆ ಹಾದು ಹೋದ ಬಗ್ಗೆ ನಕ್ಷೆಯಲ್ಲಿ ಕಾಣಿಸಿರುತ್ತಾರೆ ಎಂದರೆ ಸರಿ. ನನಗೆ ಸೇರಿದ ಜಮೀನಿನಲ್ಲಿ ಎಷ್ಟು ವಿಸ್ತೀರ್ಣದಲ್ಲಿ ರಸ್ತೆ ಹಾದು ಹೋಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ರಸ್ತೆಯ ದಕ್ಷಿಣ ಭಾಗಕ್ಕೆ ಹೆಚ್ಚು ಜಮೀನು, ಉತ್ತರದಲ್ಲಿ ಸ್ವಲ್ಪ ಭಾಗದ ಜಮೀನು ಇರುತ್ತದೆ. ರಸ್ತೆಯ ಉತ್ತರ ಭಾಗದಲ್ಲಿರುವ ನನ್ನ ಜಮೀನಿನಲ್ಲಿ ಬಂಡಾರಳ್ಳಿ ಗ್ರಾಮಸ್ಥರು ಅದು ಕಡದಕಟ್ಟೆ ಗ್ರಾಮ ಪಂಚಾಯ್ತಿಗೆ ಸೇರಿರುತ್ತದೆ ಎಂದು ಹೇಳಿ ಮನೆಗಳನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಸೇರಿದ 30 ಅಡಿ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತಾರೆ ಉಳಿದ ಭಾಗ ಖಾಲಿ ಇರುತ್ತದೆ. ಉತ್ತರದ ಭಾಗದಲ್ಲಿರುವ ಜಾಗ ಸಾಗುವಳಿಗೆ ಯೋಗ್ಯವಿರುವುದಿಲ್ಲ ಎಂದರೆ ಸಾಕ್ಷಿಯು ಈಗೇಲ್ಲಾ ಮನೆಗಳು ಕಟ್ಟಿಕೊಂಡಿರುವ ಕಾರಣ ನೀರು ಬರುವುದಿಲ್ಲ ಹಾಗಾಗಿ ಸಾಗುವಳಿ ಮಾಡುತ್ತಿಲ್ಲ ಎಂದು ಹೇಳುತ್ತಾರೆ.

9. ನಾನು ಹೇಳುವ ಹೊತ್ತುವರಿ ಜಾಗ ಪ್ರತಿವಾದಿಗೆ ಸೇರಿದ್ದು ಅವರು 30 ಗುಂಟೆ ಪ್ರದೇಶದದಲ್ಲಿ 1964 ರಿಂದ 2024 ದಾವೆ ದಾಖಲು ಮಾಡುವ ತನಕ ಅವರ ಸ್ವಾಧೀನಾನುಭದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಜಾಗವನ್ನು ಸರ್ವೇಯರ್ ರವರು ಅಳತೆ ಮಾಡಿರುವುದಿಲ್ಲ. ಸರ್ವೆಯರ್ ರವರು ತಮ್ಮ ವರದಿಯಲ್ಲಿ ಅನುಭವ ತೋರಿಸಿದಂತೆ ಅಳತೆ ಮಾಡಿರುತ್ತೇನೆಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ

ಸರ್ವೇದಾಖಲೆ, ಮಹಜರ್ ಮತ್ತು ಸ್ಕೇಚ್ ಅನ್ನು ಓದಿ ತಿಳಿದುಕೊಂಡಿರುತ್ತೇನೆ. ಸರ್ವೆಯರ್ ರವರು ಮಹಜರ್ ನಲ್ಲಿ ಅನುಭವದ ಪ್ರಕಾರ ಅಳತೆ ಮಾಡಿರುತ್ತೇನೆ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ರಸ್ತೆಯ ಉತ್ತರ ಭಾಗದಲ್ಲಿ ನನಗೆ ಸೇರಿದ ಜಾಗದಲ್ಲಿ ಗ್ರಾಮಸದ.,ರು ಮನೆಯನ್ನುಕಟ್ಟಿಕೊಂಡಿರುವ ಕಾರಣ ಅದನ್ನು ತೆರವು ಗೊಳಿಸದೆ, ಪ್ರತಿವಾದಿಗಳಿಗೆ ನೊಟಿಸ್ ಅನ್ನು ಕೊಡದೆ ನಾನು ಪ್ರತಿವಾದಿಗೆ ಸೇರಿದ ಜಮೀನಿನಲ್ಲಿ ನನಗೆ ಸೇರಿದ ಹೊತ್ತುವರಿ ಜಮೀನು ಇರುತ್ತದೆ ಎಂದು ಹೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ಯಾವಾಗಲೋ ಸರ್ವೆ ನಂಬರ್ ಒಂದು ಅಳತೆ ಯಾಗಿ ಪೋಡಿಯಾಗಿರುತ್ತದೆ ಆದರೆ ಯಾವಾಗ ಎಂದು ನನಗೆ ಗೊತ್ತಿರುವುದಿಲ್ಲ. ಈ ಹಿಂದೆ ಅಳತೆ ಮಾಡಿದ ಸಮಯದಲ್ಲಿ ಪ್ರತಿವಾದಿಯವರ ಅತ್ತೆ ಚೌಡಮ್ಮನವು 30 ಗುಂಟೆ ವಿಸ್ತೀರ್ಣ ಸ್ವಾಧೀನದಲಿಲರುತ್ತಾರೇ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಆಸ್ತಿಯ ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುವುದಿಲ್ಲ. ಸರ್ವೆಯರ್ ರವರು ನನಗೆ ಸೇರಿದ 11 ಗುಂಟೆ ಜಮೀನನ್ನು ಪ್ರತಿವಾದಿಗಳು ಹೊತುತವರಿ ಮಾಡಿರುತ್ತಾರೆ ಎಂದು ಹೇಳಿ ನಾವು ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರು ಪಡಿದಸಿರುತ್ತೇವೆ ಎಂದರೆ ಸರಿಯಲ್ಲ. ನಾನು ಹೇಳುತ್ತಿರುವ ಹೊತ್ತುವರಿಯ 11 ಗುಂಟೆ ಜಮೀನಿನಲ್ಲಿ ಎಂದೂ ನಾನು ಸ್ವಾಧೀನದಲಿರುವುದಿಲ್ಲ ಎಂದರೆ ಸರಿಯಲ್ಲ.

10. ಲಿಂಗಯ್ಯನಿಂದ ಹನುಮಯ್ಯನವರಿಗೆ 11-04-1959 ರಲ್ಲಿ ಆದಂತಹ ಕ್ರಯ ಪತ್ರದಲ್ಲಿ ಹೇಳಿರುವ ಚಕ್ಕುಬಂಧಿಗೂ ಈ ಇರುವ ಚಕ್ಕುಬಂಧಿಗೂ ವ್ಯತ್ಯಾಸವಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಆ ಜಮೀನಿನ ಅಜುಬಾಜುವಿನಲ್ಲಿ ಬೇರೆಯವರು ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಹನುಮಯ್ಯನವರು ಹುಚ್ಚಮ್ಮನಿಗೆ ಬರೆದುಕೊಟ್ಟಂತಹ ನೊಂದಾಯಿತಾ ಮರಣ ಶಾಸನವನ್ನು ನಾನು ಹಾಜರು ಪಡಿಸಿರುವುದಿಲ್ಲ. 1959 ರಲ್ಲಿ ಆದಂತಹ ಕ್ರಯ ಪತ್ರವನ್ನು ನಾನು ಹಾಜರು ಪಡಿಸಿರುತ್ತೇನೆ. ವಿಲ್ ಆಧಾರದ

ಮೇಲೆ ಹುಚ್ಚಮ್ಮನ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ. ಕಂದಾಯ ಇಲಾಖೆಗೆ ವಿಲ್ ದಾಖಲೆ ಕೊಟ್ಟ ನಂತರ ಹುಚ್ಚಮ್ಮನ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ. ಯಾವ ಸಾಲಿನಲ್ಲಿ ಹುಚ್ಚಮ್ಮನ ಹೆಸರಿಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಹುಚ್ಚಮ್ಮನವರು ಈಗ ಮೃತ ಪಟ್ಟಿದ್ದು ಅವರು ನನ್ನ ತಾಯಿ. ಮರಣಶಾಸನ ನನ್ನ ಬಳಿಯೇ ಇರುತ್ತದೆ. ಸದರಿ ಮರಣಶಾಸನವನ್ನು ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ. ಕ್ರಯ ಪತ್ರ ಮತ್ತು ಮರಣ ಶಾಸನದಲ್ಲಿ ವಿಸ್ತೀರ್ಣ ಮತ್ತು ಚಕ್ಕುಬಂಧಿ ವ್ಯತ್ಯಾಸವಿರುತ್ತದೆ ಆಗಾಗಿ ನಾನು ಅದನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

11. ಪ್ರತಿವಾದಿಗೆ ಸೇರಿದ ಜಮೀನನ್ನು ನಾನು ನೋಡಿರುತ್ತೇನೆ. ಪ್ರತಿವಾದಿಗಳು ಅವರಿಗೆ ಸೇರಿದ ಜಮೀನನ್ನು ಹಂಚಿಕೊಂಡಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ಪ್ರತಿವಾದಿಗಳಿಗೆ 30 ಗುಂಟೆ ಜಮೀನು ಇರುವುದಿಲ್ಲ. ನಾನು ಪ್ರತಿವಾದಿಗಳಿಗೆ ಸೇರಿದ ಜಮೀನಿನ ಪೂರ್ವಕ್ಕೆ ನನ್ನ ಜಮೀನು ಇರುತ್ತದೆ. ಪಶ್ಚಿಮಕ್ಕೆ ಕುಳ್ಳೆಗೌಡರ ಜಮೀನು, ಉತ್ತರಕ್ಕೆ ಬಂಡಾರಳ್ಳಿ ರಸ್ತೆ, ದಕ್ಷಿಣಕ್ಕೆ ಕಾಲುವೆ ಇದ್ದು ಅದರ ನಂತರ ಕುಳ್ಳೆಗೌಡರು ಮತ್ತು ದೊಡ್ಡಯ್ಯನವರ ಜಮೀನು ಬರುತ್ತದೆ. ನನ್ನ ಜಮೀನಿನ ಪೂರ್ವಕ್ಕೆ ಇರುವ ಜಮೀನು ಹನುಮಂತಪ್ಪನವರಿಗೆ ಸೇರಿದ ಜಮೀನಾಗಿದ್ದು ಅದು ಖಾಲಿ ಇದೆ ಎಂದರೆ ಸರಿಯಲ್ಲ. ಪ್ರತಿವಾದಿಗಳು 15 ಗುಂಟೆ ಜಮೀನಿನಲ್ಲಿ ಅಡಿಕೆ ತೋಟ ಬೆಳೆದಿರುತ್ತಾರೆ ಎಂದರೆಸ ಾಕ್ಷಿಯು ಅದರ ವಿಸ್ತೀರ್ಣ ಗೊತ್ತಿರುವುದಿಲ್ಲ ಆದರೆ ಅಡಿಕೆ ತೋಟ ಬೆಳೆದಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಜಮೀನಿನ ಪಕ್ಕದದಲ್ಲಿ ಇುವ ಉಳಿದ 15 ಗುಂಟೆ ಜಮೀನಿನಲ್ಲಿ ಪ್ರತಿವಾದಿಗಳು ದನಗಳ ಹುಲ್ಲುನ್ನು ಬೆಳೆದಿರುತ್ತಾರೆ ಎಂದರೆ ಸರಿಯಲ್ಲ.

12. ಪ್ರತಿವಾದಿಗಳಿಗೆ 30 ಗುಂಟೆ ಜಮೀನು ಮಾತ್ರ ಜೀವನಕ್ಕೆ ಆಧಾರ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ಗಳ ಇಬ್ಬರ ಗಂಡದಿರು ಮೃತಪಟ್ಟಿರುತ್ತಾರೆ ಎಂದರೆ ಸರಿ. ನಾನು ಪ್ರತಿವಾದಿಗೆ ಸೇರಿದ ಜಮೀನನ್ನು ಖರೀದಿಗೆ ಕೇಳಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಮಾರಾಟ ಮಾಡಲು ಒಪ್ಪಿರಲಿಲ್ಲ ಎಂದರೆ ಸಾಕ್ಷಿಯು ನಾನು ಅವರನ್ನು ಕೇಳಲು ಹೋಗಿರುವುದಿಲ್ಲ ಎಂದು

ಹೇಳಿರುತ್ತಾರೆ. ಈ ಕಾರಣಕ್ಕಾಗಿ ನನ್ನ ಮತ್ತು ಪ್ರತಿವಾದಿಗಳ ನಡುವೆ ವೈಮನಸ್ಸು ಇರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಆ ಉದ್ದೇಶದಿಂದ ನೋಟಿಸ್ ಅನ್ನು ಜಾರಿ ಮಾಡದೆ ಒಂದು ಕೊಟ್ಟೆ ನಕಾಶೆಯನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಜಮೀನನ್ನು ಅಳತೆ ಮಾಡಿರುವುದಿಲ್ಲ. ಪ್ರತಿವಾದಿ ಗಳ ಜಮೀನನ್ನು ಅಳತೆ ಮಾಡಿದ್ದರೆ ಅವರಿಗೆ ಇರುವ 30 ಗುಂಟೆ ಜಮೀನು ಇರುತ್ತದೆ ಎಂದು ಗೊತ್ತಾಗುತ್ತದೆ ಎಂದರೆ ಸರಿಯಲ್ಲ. ಬಂಡಾರಳ್ಳಿ ಗ್ರಾಮಸ್ಥರು ನನಗೆ ಸೇರಿದ ಜಮೀನನ್ನು ಹೊತುತವರಿ ಮಾಡಿಕೊಂಡಿರುವ ಕಾರಣ 11 ಗುಂಟೆ ಜಮೀನು ಕಡಿಮೆಯಾಗಿರುತ್ತದೆ ಎಂದರೆ ಸರಿಯಲ್ಲ. ಅದನ್ನು ಸರಿದೂಗಿಸುವ ಉದ್ದೇಶದಿಂದ ಸರ್ವೆ ಅಧಿಕಾರಿಗಳ ಜೊತೆ ಶಾಮೀಲಾಗಿ ಒಂದು ಕೊಟ್ಟೆ ನಕಾಶೆಯನ್ನು ತಯಾರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೆಯರ್ ಮಹಜರ್ ಗೆ ಚನ್ನೇಗೌಡರವರು ಸಹಿ ಮಾಡಿರುತ್ತಾರೆ. ಪ್ರತಿವಾದಿಗಳು ಸಹಿ ಮಾಡಲು ನಿರಾಕರಿಸಿರುತ್ತಾರೆ. ಅಳತೆ ಕಾಲಕ್ಕೆ ಪ್ರತಿವಾದಿಗಳು ಯಾರು ಹಾಜರಿರಲಿಲ್ಲ ಎಂದರೆ ಸರಿಯಲ್ಲ. ಅಳತೆ ಮಾಡಿದ ಸಮಯದಲ್ಲಿ 1/6 ರಲ್ಲಿ 11 ಗುಂಟೆ ಕಡಿಮೆ ಬಂದಿತ್ತು ಎಂದರೆ ಸರಿ. ನಾನು ಯಾವುದೇ ಪರಿಹಾರ ಕೇಳಬೇಕಾದರೆ ರಸ್ತೆಯ ಉತ್ತರದಲ್ಲಿ ಮನೆ ಮಾಡಿದವರ ಬಳಿ ಪರಿಹಾರ ಕೇಳಬೇಕೆಂದರೆ ಸರಿಯಲ್ಲ. ನಾನು ರಸ್ತೆಯ ಉತ್ತರದಲ್ಲಿ ಹೊತ್ತುವರಿ ಮಾಡಿಕೊಂಡಿರುವ ಹೊತ್ತುವರದಾರರನ್ನು ಈದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ರಸ್ತೆಯ ಉತ್ತರದಲ್ಲಿರುವ ಹೊತ್ತುವರಿದಾರರಿಂದ ಪರಿಹಾರ ಪಡೆಯಲು ಆಗದೆ ಇರುವ ಕಾರಣ ಪ್ರತಿವಾದಿಗಳ ವಿರುದ್ಧ ಈ ದಾವೆಯನ್ನು ಮಾಡಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಗಳು ಎಂದೂ ನನಗೆ ಸೇರಿದ 11 ಗುಂಟೆ ಜಮೀನನ್ನು ಹೊತ್ತುವರಿ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಹೇಳುವ 01 ಎಕರೆ ಜಮೀನಿನಲ್ಲಿ ಎಂದೂ ಸ್ವಾಧೀನದಲ್ಲಿರಲಿಲ್ಲ ಎಂದರೆ ಸರಿಯಲ್ಲ. ವಾಸ್ತವಾಗಿ ನಾನು 01 ಎಕರೆ ಜಮೀನಿನಲ್ಲಿ ಸ್ವಾಧೀನದಲ್ಲಿರುವುದಿಲ್ಲ ಆದರೆ ದಾಖಲೆಯಲ್ಲಿ ಮಾತ್ರ 01 ಎಕರೆ ತೋರಿಸಿರುತ್ತಾರೆ ಎಂದರೆ ಸರಿಯಲ್ಲ. 2019 ರಲ್ಲಿ ಅಳತೆ ಮಾಡಮ ಸಮಯದಲ್ಲಿ ರಸ್ತೆಯ ಉತ್ತರ ಭಾಗದಲ್ಲಿ 11 ಗುಂಟೆ ವಿಸ್ತೀರ್ಣದಲ್ಲಿ ಗ್ರಾಮಸ್ಥರು ಹೊತ್ತುವರಿ ಮಾಡಿದ ವಿಷಯ ನನಗೆ

ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು ಆಗ ಅರ್ಧ ಗುಂಟೆ ಜಮೀನಲ್ಲಿ ಮನೆ ಕಟ್ಟಿರುವ ವಿಚಾರ ಗೊತ್ತಾಗಿರುತ್ತದೆ. ನನ್ನ ಜಮೀನಿನ ರಸ್ತೆ ಆದು ಹೋಗಿದ್ದು ಆ ರಸ್ತೆಯ ಉತ್ತರ ಬಾಗದಲ್ಲಿ ಎಷ್ಟು ಅಳತೆಯ ಜಮೀನು ಇದೆ ಎಂದು ಹೇಳಿ ಅಳತೆ ಮಾಡಿರುವುದಿಲ್ಲ ಮತ್ತು ಅದರ ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ನಾನು ಸರ್ವೇಯರ್ ಅನ್ನು ರಸ್ತೆಯ ಉತ್ತರಕ್ಕಿರುವ ಜಮೀನನ್ನು ಅಳತೆ ಮಾಡುವಂತೆ ಕೇಳಿರುತ್ತೇನೆ ಆದರೆ ಸರ್ವೆಯರ್ ಅವರು ಹೆಚ್ಚಿನ ಜಮೀನು ಹೋಗಿರುವುದಿಲ್ಲ ಎಂದು ಹೇಳಿರುತ್ತಾರೆ. ಆ ಜಮೀನನ್ನು ಅಳತೆ ಮಾಡಲು ನನಗೆ ತೊಂದರೆ ಇರುವುದಿಲ್ಲ. ರಸ್ತೆಯ ಉತ್ತರ ಬಾಗದಲ್ಲಿರುವ ಜಮೀನು 11 ಗುಂಟೆ ಇದ್ದು ಅದು ನಮಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನಾನು ಉದ್ದೇಶ ಪೂರ್ವಕವಾಗಿ ರಸ್ತೆಯ ಉತ್ತರಕ್ಕಿರುವ 11 ಗುಂಟೆ ಜಮೀನನ್ನು ಅಳತೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ರಸ್ತೆಯ ಉತ್ತರಕಿಕಕರುವ ಜಮೀನ್ನು ಅಳತೆ ಮಾಡಿಸಿದರೆ ಒಟುಟ ಎಷುಟ ಎಕರೆ ಜಮೀನು ಇತ್ತು ಎಂದು ಗೊತ್ತಾಗುತ್ತಿತ್ತು ಎಂದರೆಸ ರಿಯಲ್ಲ. ದುರುದ್ದೇಶಪೂರ್ವಕವಾಗಿ ರಸ್ತೆಯ ಉತ್ತರಕ್ಕಿರುವ ಜಮೀನನ್ನು ಅಳತೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ನಾನು ಕೇಳಿರುವ ಪರಿಹಾರವನ್ನು ಪಡೆಯಲು ಬಾಧ್ಯಸ್ಥನಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ

ದಿ.17.02.2025 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎ.ಎನ್.ಟಿ ವಕೀಲರಿಂದ.**

1. ದಿಃ 08-03-1977 ರ ದಿನಾಂಕದ ನೊಂದಾಯಿತಾ ಮರಣ ಶಾಸನವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-21 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

*(ರಾಘವೇಂದ್ರ. ಡಿ.)*
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ